ಅಸಲು ದಾವಾ ನಂಃ 2/2024
ಪಿ ಡಬ್ಲ್ಯುಃ1

<u>ದಿನಾಂಕಃ **20-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ **1, 4** ಮತ್ತು **5** ರವರ ಪರ ಶ್ರೀ ಪಿಟಿಡಿ ವಕೀಲರಿಂದಃ</u>

ದಾವ ಸ್ವತ್ತು ಇ ಗೆ ಸಂಬಂಧಪಟ್ಟಂತೆ ನಾನು ಪಹಣಿ ಪತ್ರಿಕೆಯಲ್ಲಿ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ದಾವಾ ಹೂಡುವ ಪೂರ್ವದಲ್ಲಿ ದಾವಾ ಸ್ವತ್ತು ಇ ಅನ್ನು ಮಾರಾಟ ಮಾಡಿರುವ ಬಗ್ಗೆ ಕ್ರಯಪತ್ರ, ಪಹಣಿ ಹಾಗೂ ಮ್ಯುಟೇಷನ್ ಅನ್ನು ಪರಿಶೀಲನೆ ಮಾಡಿರುವುದಿಲ್ಲ. ಸ.ನಂ.51 ದುರಸ್ತು ಆದ ನಂತರ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ದಾವೆ ಹೂಡುವ ಪೂರ್ವದಲ್ಲಿ ಪರಿಶೀಲನೆ ಮಾಡಿರುತ್ತೇನೆ.

2. ಸಾಕ್ಷಿಗೆ ಸ.ನಂ.55/1 ಪಹಣಿ ಪತ್ರಿಕೆ ತೋರಿಸಲಾಗಿ ಸದರಿ ಆಸ್ತಿ ಥಾಮಸ್ ಡಿಸೋಜಾ, ಸ.ನಂ.55/2 ಹಾಗೂ ಸ.ನಂ.51/4 ಮಹೇಶ್ ಹೆಸರಿನಲ್ಲಿ ಮತ್ತು ಸ.ನಂ.51/5 ಅಭಿಲಾಷ್ ಹೆಸರಿನಲ್ಲಿ ಪಹಣಿ ಪತ್ರಿಕೆ ಇದ್ದು ಅವುಗಳನ್ನು ಸಾಕ್ಷಿ ನೋಡಿ ಒಪ್ಪಿ ಕೊಂಡಿದ್ದು ಅವುಗಳನ್ನು ಕ್ರಮವಾಗಿ ನಿಡಿ-1 ರಿಂದ ನಿಡಿ-4 ಎಂದು ಗುರುತಿಸಲಾಯಿತು. ದಾವಾ ಹೂಡುವ ಕಾಲಕ್ಕೆ ಈ ಮೇಲೆ ಹೇಳಿದ ಆಸ್ತಿಗಳ ಪಹಣಿಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಮೇಲೆ ಹೇಳಿದ ಆಸ್ತಿಗಳನ್ನು ದಾವಾ ಸ್ವತ್ತು ಅನುಸೂಚಿಯಲ್ಲಿ ನಮ್ಮ ವಕೀಲರು ನಮೂದು ಮಾಡಿರುತ್ತಾರೆ. ಪ್ರತಿವಾದಿ 1, 4 ಮತ್ತು 5 ರವರು ಪ್ರತಿವಾದಿ 8 ರಿಂದ 11 ರವರಿಗೆ ಮಾರಾಟ ಮಾಡಿದ ಆಸ್ತಿಗಳ ಬಗ್ಗೆ ನಾನು ಕ್ರಯ ಪತ್ರವನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ಸದರಿ ಕ್ರಯಪತ್ರಗಳನ್ನು ಅಸಿಂಧುಗೊಳಿಸಬೇಕು ಎಂದು ಈ ದಾವೆಯಲ್ಲಿ ಕೇಳಿಕೊಂಡಿರುವುದಿಲ್ಲ.

3. ನಿಪಿ-5 ಮತ್ತು 6 ರ ವಿಭಾಗ ಪತ್ರಗಳನ್ನು ರದ್ದು ಪಡಿಸುವಂತೆ ಕೋರಿ ನಾನು ಈ ದಾವೆಯಲ್ಲಿ ಕೇಳಿಕೊಂಡಿರುವುದಿಲ್ಲ. ನಿಪಿ-14 ಮತ್ತು 15 ಕ್ರಯಪತ್ರಗಳನ್ನು ರದ್ದು ಪಡಿಸುವಂತೆ ಕೋರಿ ನಾನು ಈ ದಾವೆಯಲ್ಲಿ ಕೇಳಿಕೊಂಡಿರುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತು ಎ ರಲ್ಲಿ 8 ನೇ ಆಸ್ತಿ ಕಾಂತಪೂಜಾರಿ ಇವರಿಗೆ ಯಾವ ರೀತಿ ಬಂದಿರುತ್ತದೆ ಎಂಬ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಕಾಂತಪೂಜಾರಿಯವರಿಗೆ ಆಸ್ತಿಗಳು ನಿಪಿ-2

ಮತ್ತು 3 ರಂತೆ ಬಂದಿರುವ ಬಗ್ಗೆ ಹೇಳಿದ್ದು ಅದರಲ್ಲಿ ದಾವಾ ಎ ಸ್ವತ್ತು 8 ರ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ದಾವೆ ಹೂಡುವ ಪೂರ್ವದಲ್ಲಿ ಸದರಿ ಆಸ್ತಿ ಕಾಂತಪೂಜಾರಿ ಇವರಿಗೆ ಯಾವ ರೀತಿ ಬಂದಿರುತ್ತದೆ ಎಂಬ ಬಗ್ಗೆ ದಾಖಲೆ ಪರಿಶೀಲನೆ ಮಾಡಿರುತ್ತೇನೆ. ದಾವಾ ಸ್ವತ್ತುಗಳು ಒಟ್ಟು ಕುಟುಂಬಕ್ಕೆ ಸೇರಿದ್ದು ಎಂಬುದರ ಬಗ್ಗೆ ನಾನು ಪ್ರತಿವಾದಿ 1, 2 ಮತ್ತು 4, 5 ರವರಿಗೆ ನೋಟೀಸ್ ಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಿನಾಂಕ 01.02.2024 ರಂದು ದಾವೆ ಹೂಡಲು ವ್ಯಾಜ್ಯ ಕಾರಣ ಉಂಟಾಗಿರುತ್ತದೆ ಎಂದು ನಾನು ಸೃಷ್ಟಿ ಮಾಡಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಕಾಂತಪೂಜಾರಿ ಇವರಿಗೆ ಮಂಜೂರು ಆಗುವ ಕಾಲಕ್ಕೆ ನಾವು ಮತ್ತು ಪ್ರತಿವಾದಿ 3 ರವರು ಮದುವೆಯಾಗಿ ನಮ್ಮ ಗಂಡನ ಮನೆಯಲ್ಲಿ ಇದ್ದ ಕಾರಣ ನಾವು ಒಟ್ಟು ಕುಟುಂಬದ ಸದಸ್ಯರು ಇರುವುದಿಲ್ಲ ಎಂದರೆ ಸರಿಯಲ್ಲ.

4. ಕಾಂತಪೂಜಾರಿ ಇವರು ನಿಧನರಾದ ನಂತರ ಅವರ ಮಕ್ಕಳ ಹೆಸರಿಗೆ ಖಾತೆ ಬದಲಾವಣೆ ಆದ ವಿಚಾರ ನಮಗೆ ಗೊತ್ತಿದ್ದು ನಾವು ಈಗ ಸದರಿ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ದಿಃ 12.06.2015 ರಂದು ದಯಾನಂದ್ ಪೂಜಾರಿ ಮತ್ತು ಅವರ ಹೆಂಡತಿ ಮಕ್ಕಳು 8 ನೇ ಪ್ರತಿವಾದಿಗೆ ದಾವಾ ಆಸ್ತಿ ಎ 6 ರ ಸ್ವತ್ತನ್ನು ಮಾರಾಟ ಮಾಡಿರುವ ವಿಚಾರ ನಮಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಿಃ 29.03.2024 ರಂದು 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಕ್ಕಳು 10 ನೇ ಪ್ರತಿವಾದಿಗೆ ದಾವಾ ಸ್ವತ್ತು ಎ ರಲ್ಲಿ 7 ರಲ್ಲಿ 2.12 ಗುಂಟೆ ಯನ್ನು ಮಾರಾಟ ಮಾಡಿರುವ ವಿಚಾರ ನನಗೆ ದಾವೆ ಹೂಡುವ ಪೂರ್ವದಲ್ಲಿಯೇ ಗೊತ್ತಿತ್ತು ಎಂದರೆ ಸರಿಯಲ್ಲ. ದಿಃ 23.10.2018 ರಂದು 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಮಕ್ಕಳು 11 ನೇ ಪ್ರತಿವಾದಿಗೆ ದಾವಾ ಸ್ವತ್ತು ಎ ರಲ್ಲಿ 7 ರಲ್ಲಿ 2.04 ಗುಂಟೆ ಹಾಗೂ ಸ.ನಂ.51/3 ರಲ್ಲಿ 2.00 ಗುಂಟೆಯನ್ನು ಮಾರಾಟ ಮಾಡಿರುವ ವಿಚಾರ ನನಗೆ ದಾವೆ ಹೂಡುವ ಪೂರ್ವದಲ್ಲಿಯೇ ಗೊತ್ತಿತ್ತು ಎಂದರೆ ಸರಿಯಲ್ಲ.

5. ದಾವಾ ಸ್ವತ್ತು 1 ಅನ್ನು ಗಣೇಶ್ ಮತ್ತು ಜ್ಯೋತಿ ಗಣೇಣ್ ರವರು 6 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು ತದ ನಂತರ 6 ನೇ ಪ್ರತಿವಾದಿ 7 ನೇ ಪ್ರತಿವಾದಿಗೆ

ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ 09.03.2022 ರಂದು 1 ನೇ ಪ್ರತಿವಾದಿ, ಅವರ ಹೆಂಡತಿ ಮತ್ತು ಮಕ್ಕಳು ಪ್ರತಿವಾದಿ 9 ರವರಿಗೆ ಸ.ನಂ.51/3 ರಲ್ಲಿ 11.00 ಗುಂಟೆ ಯನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಮಾರಾಟ ಮಾಡಿದ ಆಸ್ತಿಗಳನ್ನು ಈ ದಾವೆಯಲ್ಲಿ ತೋರಿಸದೇ ಹಾಗೂ ಸದರಿ ಕ್ರಯ ಪತ್ರಗಳು ಅಸಿಂಧು ಎಂದು ಘೋಷಣಾತ್ಮಕ ಪರಿಹಾರ ಕೇಳದೇ ಈ ದಾವೆ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ಮಾರಾಟ ಮಾಡಿದ ಆಸ್ತಿಗಳಿಗೆ ಸಂಬಂಧಪಟ್ಟಂತಹ ಎಲ್ಲಾ ಪಕ್ಷಗಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದ ಕಾರಣ ಈ ದಾವೆ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ. ನಾವು ಕುಟುಂಬಕ್ಕೆ ಸೇರಿದ ಎಲ್ಲಾ ಆಸ್ತಿಗಳ್ಳು ಈ ದಾವೆಯಲ್ಲಿ ಸೇರಿಸದಿರುವ ಕಾರಣ ಈ ದಾವೆ ಊರ್ಜಿತ ಆಗುವುದಿಲ್ಲ ಎಂದರೆ ಸರಿಯಲ್ಲ.

6. ಜಯಪುರದಲ್ಲಿ ಆಸ್ತಿಗಳಿಗೆ ಬೇಡಿಕೆ ಹೆಚ್ಚಾಗಿರುವುದರಿಂದ ಪ್ರತಿವಾದಿ 1 ಮತ್ತು 4 ಮತ್ತು 5 ರವರಿಗೆ ದ್ವೇಷ ಸಾಧಿಸುವ ಸಲುವಾಗಿ ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸಹ ಈ ದಾವೆಯನ್ನು ದ್ವೇಷದಿಂದ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಹಾಗೂ ಪ್ರತಿವಾದಿ 3 ರವರಿಗೆ ಕಾಂತಪೂಜಾರಿ ಇವರಿಗೆ ಆಸ್ತಿ ಮಂಜೂರು ಆಗುವ ಕಾಲಕ್ಕೆ ಒಟ್ಟು ಕುಟುಂಬದ ಸದಸ್ಯರು ಇಲ್ಲದ ಕಾರಣ ಭಾಗ ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರು ನನಗೆ ಯಾವುದೇ ಅಧಿಕಾರ ಪತ್ರ ಬರೆದುಕೊಡದೇ ಇದ್ದರೂ ನಾನು ಅಧಿಕಾರ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ವಾದಿಯರು ಹಾಗೂ 3 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯ ಹೊರಬರುತ್ತದೆ ಎಂದು ನಾನೇ ಅಧಿಕಾರ ಪತ್ರವನ್ನು ಸೃಷ್ಟಿ ಮಾಡಿಕೊಂಡು ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ **6** ಮತ್ತು **7** ರವರ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು**.**

ಅಸಲು ದಾವಾ ನಂಃ 2/2024
ಪಿ ಡಬ್ಲ್ಯುಃ1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ